# ನೀರಿನಲ್ಲಿ ಈಜುವ ಕಾರು!

'ಮಾನವ ನೀರಿನಲ್ಲಿ ಮೀನಿನಂತೆ ಈಜೋದು ಕಲಿತ' ಎನ್ನುವ ಮಾತು ಹಳೆಯದಾಯಿತು. ಜರ್ಮನಿಯ ವಾಹನ ತಯಾರಿಕಾ ಕಂಪೆನಿಯೊಂದು ಇನ್ನೊಂದು ಹೆಜ್ಜೆ ಮುಂದೆ ಹೋಗಿ ಕಾರಿಗೂ ನೀರಿನಲ್ಲಿ ಈಜುವುದನ್ನು ಕಲಿಸಿದೆ. ಇನ್ನು ನೀರಿನಲ್ಲಿಯೂ ಕಾರನ್ನು ಓಡಿಸಬಹುದು!

ಅರೆ, ಇದು ಸಾಧ್ಯವೇ? ಎಂದು ಅಚ್ಚರಿ ಪಡಬೇಡಿ. ವಾಹನ ತಯಾರಿಸುವಲ್ಲಿ ಹೊಸತನವನ್ನು ಕಂಡುಹಿಡಿಯುತ್ತಲೇ ಇರುವ ಜರ್ಮನಿಯ 'ಫೋಕ್ಸ್‌ವ್ಯಾಗನ್' ಕಂಪೆನಿ ಇಂಥದ್ದೊಂದು ಕಾರು ತಯಾರಿಸಿದೆ. ಇದರ ಹೆಸರು 'ಅಕ್ವಾ'.

ಈ ಕಾರು ಮೀನಿನಂತೆ ನೀರಿನಲ್ಲಿ ಈಜುತ್ತದೆ. ಹಾಗೆಂದು ಇದರ ವ್ಯಾಪ್ತಿ ಕೇವಲ ನೀರಿಗೆ ಸೀಮಿತವಲ್ಲ. ನೆಲದ ಮೇಲೂ ಓಡಾಡಬಹುದಾದ ಈ ಕಾರು ಮಂಜುಗಡ್ಡೆಯಲ್ಲಿಯೂ ಸುಲಭದಲ್ಲಿ ಚಲಿಸುತ್ತದಂತೆ. ಅಷ್ಟೇ ಏಕೆ ಮರಳು ಹಾಗೂ ನೀರ್ಗಲ್ಲುಗಳ ಮೇಲೂ ಯಾವುದೇ ತೊಂದರೆ ಇಲ್ಲದೆ ಇದು ಓಡುತ್ತದೆ.

ಇಂಥ ಅದ್ಭುತ ಕಾರನ್ನು ಕಂಡು ಹಿಡಿದದ್ದು ಚೀನಾದ 21 ವರ್ಷದ ಯುವ ಎಂಜಿನಿಯರ್ ಯೂಹಾನ್ ಜಾಂಗ್!

**ಪರಿಸರ ಸ್ನೇಹಿ**

'ಫೋಕ್ಸ್‌ವ್ಯಾಗನ್ ಅಕ್ವಾ ಪರಿಸರ ಸ್ನೇಹಿ ಕಾರು ಕೂಡಾ ಆಗಿದೆ' ಎನ್ನುವುದು ಕಂಪೆನಿಯ ಹೇಳಿಕೆ. ಹೈಡ್ರೋಜನ್ ಗ್ಯಾಸ್ ಬಳಸಿ ಇದನ್ನು ಓಡಿಸಲಾಗುತ್ತದೆ. ಯೂರೋಪ್ ಮಾರುಕಟ್ಟೆಗೆ ಬಿಡುಗಡೆಗೊಂಡಿರುವ ಸಣ್ಣ ಕಾರೊಂದು ಬಯೋಗ್ಯಾಸ್ ಅಥವಾ ಮಿಥೇನ್‌ನಿಂದ ಚಾಲನೆಯಾಗುವಂಥದ್ದು. ಅದನ್ನೇ ಮಾದರಿಯಾಗಿಟ್ಟುಕೊಂಡು 'ಪರಿಸರ ಸ್ನೇಹಿ' ಆಗುವಂತೆ ಈ 'ಅಕ್ವಾ'ಕಾರನ್ನು ರೂಪಿಸಲಾಗಿದೆ.

'ಡೀಸೆಲ್, ಪೆಟ್ರೋಲ್ ಬಳಕೆಯಿಂದ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಆದರೆ ಇಲ್ಲಿ ಇಂತಹ ಯಾವುದೇ ತೊಂದರೆ ಇಲ್ಲ' ಎನ್ನುತ್ತಾರೆ ಕಂಪೆನಿಯ ಮುಖ್ಯಸ್ಥರು.

ಈ ಕಾರಿಗೆ ಶಕ್ತಿಶಾಲಿ ಎಂಜಿನ್ ಅಳವಡಿಸಲಾಗಿದೆ. ಗಂಟೆಗೆ 100 ಕಿಲೋ ಮೀಟರ್ ವೇಗ ಪಡೆಯುವ ಸಾಮರ್ಥ್ಯವನ್ನು ಈ ಕಾರು ಹೊಂದಿದೆ. ಇದರಲ್ಲಿ ಕೇವಲ ಇಬ್ಬರು ಮಾತ್ರ ಕುಳಿತುಕೊಳ್ಳಬಹುದು. ಎದುರುಗಡೆಯಿಂದ ಬರುತ್ತಿರುವ ಯಾವುದೇ ವಾಹನವನ್ನು ಕೂಡ ಸುಲಭವಾಗಿ ಪತ್ತೆ ಹಚ್ಚಬಹುದಾದ ಸಾಧನಗಳನ್ನು ಕಾರಿನ ವಿಂಡ್‌ಸ್ಕ್ರೀನ್‌ಗೆ ಅಳವಡಿಸಲಾಗಿದೆ.

ಸದ್ಯ ಈ ಕಾರು ಪ್ರಾಯೋಗಿಕ ಹಂತದಲ್ಲಿದೆ. ಶೀಘ್ರದಲ್ಲಿಯೇ ಜನಸಾಮಾನ್ಯರನ್ನು ತಲುಪುವ ನಿರೀಕ್ಷೆ ಇದೆ. ಕಾರಿನ ಬೆಲೆಯನ್ನು ಮಾತ್ರ ಇದುವರೆಗೆ ಕಂಪೆನಿ ಬಹಿರಂಗಗೊಳಿಸಿಲ್ಲ.

■ ಸುಚೇತನಾ ನಾಯ್ಕ



